ಶ್ರೀ ಬಿ. ರಾಚಯ್ಯ.—ನಾನೇ ಅವರನ್ನು ಕರೆಸಿಕೊಂಡು ಇವೊತ್ತು ಬೆಳಿಗ್ಗೆ ಅವರ ಹತ್ತಿರ ವಿಷಯಂಗಳನ್ನು ವಿವರವಾಗಿ ತಿಳಿದುಕೊಂಡಿದ್ದೇನೆ. ಆದಂದರಿಂದ ಈಗ ನನಗೆ ಬಂದಿರತಕ್ಕಂತಹ ಮಾಹಿತಿಗೂ ಅದಕ್ಕೂ ನನಗೆ ಸಮಂಜಸ ಕಾಣಲಿಲ್ಲ. ಆದುದರಿಂದ ಡಿ.ಐ.ಜಿ.ಯವರಿಗೆ ಈ ಕುರಿತು ತತ್‌ಕ್ಷಣ ವರದಿ ಕೊಡಬೇಕೆಂದು ಹೇಳಿದ್ದೇನೆ, ಮಾನ್ಯ ಸದಸ್ಯರುಗಳ ಗೌರವವನ್ನು ಕಾಪಾಡುವಲ್ಲಿ ನಾನು ಯಾರಿಗೂ ಹಿಂದೆ ಬಿದ್ದಿಲ್ಲ. ಒಬ್ಬ ಶಾಸಕರಿಗೆ ಹೀಗೆ ಆಗಿರುವುದರಿಂದ ಆ ವಿಷಯದಲ್ಲಿ ತೀವ್ರವಾದ ಕ್ರಮತೆಗೆದುಕೊಳ್ಳಲು ಅನುಕೂಲವಾಗುವಂತೆ ವಿವರವಾದ ಎನ್‌ಕ್ವಾಯರಿ ರಿಪೋರ್ಟ್ ಕೊಡಿ ಎಂದು ನಾನು ಡಿ.ಐ.ಜಿ.ಯವರಿಗೆ ಹೇಳಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖಾರ್ಗೆ.—ಹಾಗೆಂದ ಮೇಲೆ ಹೇಳಿಕೆಯನ್ನು ನಾಡಿದ್ದು ಕೊಡುತ್ತೀರಾ ಅಥವಾ ಯಾವಾಗ ಕೊಡುತ್ತೀರಿ ಅದನ್ನು ಹೇಳಿ.

ಉಪಾಧ್ಯಕ್ಷರು.—ಒಂದೆರಡು ದಿವಸಗಳಲ್ಲಿ ಕೊಡುತ್ತಾರೆ.

ಶ್ರೀ ಕೆ. ಬಿ. ಕೋಳಿವಾಡ —ಸಂಬಂಧಪಟ್ಟಂತಹ ಶಾಸಕರೇ ಸಂಪೂರ್ಣವಾದ ವಿವರಗಳನ್ನು ಕೊಟ್ಟಾಗ್ಯೂ ಕೂಡ ಅವರ ಮೇಲೆ ವಿಶ್ವಾಸ ಇಡದೇ, ತಮ್ಮ ಅಧಿಕಾರಿಗಳಿಂದ, ಡಿ.ಐ.ಜಿ.ಯವರಿಂದ ರಿಪೋರ್ಟ್ ತರಿಸಿಕೊಳ್ಳಬೇಕೆಂದು ಹೇಳಿದರೆ, ಇದು ಯಾವ ನ್ಯಾಯ ? ಅಂದರೆ ಅಧಿಕಾರಿಗಳನ್ನು ನಂಬುತ್ತಾರೆಯೇ ಎನಹ ಶಾಸಕರನ್ನು ನಂಬುವಂತಿಲ್ಲ, ಅವರ ವರದಿಯನ್ನು ನಂಬುತ್ತಿಲ್ಲ ಎಂದು ಹೇಳಿದರೆ ಹೇಗೆ ? ರಾಜ್ಯದಲ್ಲಿ ಇಂತಹವರು ಬದುಕುವುದಾದರೂ ಹೇಗೆ ?

ಶ್ರೀ ಬಿ ರಾಚಯ್ಯ.—ಮಾನ್ಯ ಸದಸ್ಯರಿಗೆ ಆ ಶಾಸಕರ ಮೇಲೆ ಎಷ್ಟು ಅಭಿಮಾನ ಇದೆಯೋ ಹಾಗೆಯೇ ನನಗೂ ನಿಮಗಿಂತ ಸ್ವಲ್ಪ ಜಾಸ್ತಿ ಅಭಿಮಾನ ಇದೆ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಆ ದೃಷ್ಟಿಯಿಂದಲೇ ಕೂಡ ನ್ಯಾಯ ದೊರಕಿಸಿಕೊಡಬೇಕೆಂದು ವಿವರವಾದಂತಹ ವರದಿಯನ್ನು ತರಿಸುವುದಕ್ಕೋಸ್ಕರವಾಗಿ ಹೇಳಿದ್ದೇವೆಯೋ ಹೊರತು ಇದನ್ನು ಮುಚ್ಚಿಡುವುದಕ್ಕೋಸ್ಕರವಾಗಿ ಮಾಡಿಲ್ಲ.

ಶ್ರೀ ಕೆ. ಬಿ. ಕೋಳಿವಾಡ —ಇದುವರೆಗೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಯಾವ ಕ್ರಮವನ್ನು ತೆಗೆದುಕೊಂಡಿದ್ದೀರಿ ಎಂಬ ಬಗ್ಗೆ ಹೇಳಬೇಕಲ್ಲ.

ಉಪಾಧ್ಯಕ್ಷರು.—ಪೂರ್ಣವಾದ ಮಾಹಿತಿಯನ್ನು ತರಿಸಿಕೊಂಡು ಆ ಮೇಲೆ ಉತ್ತರ ಹೇಳುವ ಉದ್ದೇಶ ಅವರದ್ದು.

ಶ್ರೀ ಬಿ. ರಾಚಯ್ಯ.—ಈಗ ಅವರು ವಿಚಾರಣೆ ಮಾಡಿದ್ದಾರೆ. ಬಹುಶಃ ಮೂರು ಜನರು, ಎಸ್.ಐ. ಮತ್ತು ಪೋಲೀಸ್ ಪೇದೆಗಳು ಯಾರು ಇದ್ದಾರೋ ಅವರನ್ನು ಸಸ್ಪೆಂಡ್‌ನಲ್ಲಿ ಇಟ್ಟಿದ್ದಾರೆ. ಆ ಕುರಿತು ಸಂಪೂರ್ಣವಾದ ಎನ್‌ಕ್ವಾಯರಿ ಮಾಡಿ ನನಗೆ ವರದಿಯನ್ನು ಕಳುಹಿಸಿಕೊಡಿ ಎಂದು ಹೇಳಿದ್ದೇನೆ.

(2) ಕರ್ನಾಟಕ ರಾಜ್ಯದ ಮಿಾನುಗಾರಿಕೆ ಇಲಾಖೆಯ ಕ್ಷೇತ್ರಪಾಲಕರ ಸಂಘದವರು ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ಸರದಿ ಉಪವಾಸ ಸತ್ಯಾಗ್ರಹ ನಡೆಸುವ ಬಗ್ಗೆ

ಶ್ರೀ ವಿ. ಎಸ್. ಕೌಜಲಗಿ (ಬೈಲಹೊಂಗಲ).—ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದ ಮಿಾನುಗಾರಿಕೆ ಇಲಾಖೆಯ ಕ್ಷೇತ್ರಪಾಲಕರ ಸಂಘದವರು ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ಸರದಿ ಉಪವಾಸ ಸತ್ಯಾಗ್ರಹ ನಡೆಸುತ್ತಿರುವ ಬಗ್ಗೆ ಮಾನ್ಯ ಕರ್ನಾಟಕ ರಾಜ್ಯ ಮಿಾನುಗಾರಿಕೆ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಸಿ. ಬೈರೇಗೌಡ (ಮಿಾನುಗಾರಿಕೆ ಮತ್ತು ಬಂದರು ಇಲಾಖಾ ಸಚಿವರು).— ಮಾನ್ಯ ಅಧ್ಯಕ್ಷರೇ.....

ಕರ್ನಾಟಕ ರಾಜ್ಯದ ಮಿಾನುಗಾರಿಕೆ ಇಲಾಖೆಯ ಕ್ಷೇತ್ರಪಾಲಕರ ಸಂಘವು ಮಿಾನುಗಾರಿಕೆ ಕ್ಷೇತ್ರಪಾಲಕರಿಗೆ ಕನ್ನಡ ಭಾಷಾ ಪರೀಕ್ಷೆಗೆ ವಿನಾಯಿತಿ ನೀಡಿ ವಾರ್ಷಿಕ ಬಡ್ತಿ ಕೊಡುವಂತೆಯು, ಪದೋನ್ನತಿ ಹುದ್ದೆಗೆ ನಿಗದಿಪಡಿಸಿದ ಎಸ್,ಎಸ್.ಎಲ್.ಸಿ. ಮತ್ತು ಗೊತ್ತುಪಡಿಸಿದ ಇಲಾಖಾ ಪರೀಕ್ಷೆಗಳನ್ನು

ವಿನಾಯಿತಿಗೊಳಿಸಿ ಕಾಲ ಮಿತಿ ಆಯ್ಕೆ ವೇತನ ಶ್ರೇಣಿಯನ್ನು ನೀಡಬೇಕೆಂದು ಹಾಗೂ ಇತರ ಬೇಡಿಕೆಗಳನ್ನು ಈಡೇರಿಸುವಂತೆ ದಿನಾಂಕ ೨೦-೧-೧೯೮೬ರಿಂದ ಸರದಿ ಉಪವಾಸ ಸತ್ಯಾಗ್ರಹವನ್ನು ಆರಂಭಿಸಿದ್ದರು.

ಸರ್ಕಾರದ ಆದೇಶದ ಸಂಖ್ಯೆ ಎಎಹೆಚ್ ೬೨ ಎಸ್‌ಎಫ್‌ಇ ೮೫ ದಿನಾಂಕ ೧೯-೧೧-೧೯೮೫ರಲ್ಲಿ ಮಾನ್ಯಗಾರಿಕೆ ಇಲಾಖೆಯ ಮಾನ್ಯ ಕ್ಷೇತ್ರ ಪಾಲಕರು ಕನ್ನಡ ಭಾಷಾ ಪರೀಕ್ಷೆಯನ್ನು ಕಡ್ಡಾಯವಾಗಿ ತೇರ್ಗಡೆ ಹೊಂದಬೇಕೆಂದು ಹಾಗೂ ಈ ವರ್ಗದ ನೌಕರರನ್ನು ಗ್ರೂಪ್ 'ಡಿ" ಎಂದು ಪರಿಗಣಿಸಲು ಅಸಾಧ್ಯವೆಂದು ತಿಳಿಸಲಾಗಿತ್ತು.

ಮಾನ್ಯಗಾರಿಕೆ ಇಲಾಖೆಯ ಈ ಮಾನ್ಯಗಾರಿಕೆ ಕ್ಷೇತ್ರಪಾಲಕ ನೌಕರವರ್ಗದವರು ರಾಜ್ಯ ಪುನರ್ವಿಂಗಡನೆಯಾದಂದಿನಿಂದ ಅಂದರೆ ದಿನಾಂಕ ೧-೧೧-೧೯೫೬ರಿಂದ ನಾಲ್ಕನೇ ದರ್ಜೆ ನೌಕರರೆಂದು ಪರಿಗಣಿಸಲಾಗಿತ್ತು. ಸರ್ಕಾರದ ಆದೇಶ ಡಿಪಿಎಆರ್ ೭೦ ಎಸ್‌ಎಸ್‌ಆರ್ ೭೯ ದಿನಾಂಕ ೧೫-೬-೧೯೮೧ ರಂತೆ ವಿವಿಧ ಹುದ್ದೆಗಳನ್ನು ವೇತನ ಶ್ರೇಣಿಗಳನ್ವಯ ಗ್ರೂಪ್ ಎ,ಬಿ,ಸಿ ಮತ್ತು ಡಿ ಎಂದು ವರ್ಗೀಕರಣ ಗೊಳಿಸಲಾಗಿದೆ ಆ ಪ್ರಕಾರ ಮಾನ್ಯಗಾರಿಕೆ ಕ್ಷೇತ್ರಪಾಲಕ ಹುದ್ದೆಯು ಕರ್ನಾಟಕ ಪ್ರಶಾಸನ ಸೇವಾ (ವರ್ಗೀಕರಣ ನಿಯಂತ್ರಣ ಅಪೀಲು) ನಿಯಮ ೧೯೫೭ರ ಶೆಡ್ಯೂಲ್ (೪)ರಲ್ಲಿ ವಿವಿಧ ಹುದ್ದೆಗಳೊಂದಿಗೆ ಸೇರ್ಪಡೆಯಾಗದಿದ್ದರಿಂದಲೂ, ಸದರಿ ನೌಕರರು ರೂ ೨೫೦-೪೦೦ ಕ್ಕಿಂತ (೧೯೭೬ರ ವೇತನಶ್ರೇಣಿ) ಹೆಚ್ಚಿನ ವೇತನ ಶ್ರೇಣಿ ಪಡೆಯುತ್ತಿದ್ದುದರಿಂದ (ಅಂದರೆ ರೂ. ೨೮೦-೫೦೦) ಈ ನೌಕರರನ್ನು ಗ್ರೂಪ್ 'ಸಿ' ಎಂದು ಪರಿಗಣಿಸಲಾಗಿದೆ.

ಕರ್ನಾಟಕ ಭಾಷಾ ಪರೀಕ್ಷೆ ಮತ್ತು ಇಲಾಖಾ ಪರೀಕ್ಷೆ ನಿಯಮಾವಳಿಯಂತೆ ಗ್ರೂಪ್ 'ಸಿ' ವರ್ಗದ ನೌಕರರು ಕನ್ನಡ ಭಾಷಾ ಪರೀಕ್ಷೆ ವಾರ್ಷಿಕ ಬಡ್ತಿಯನ್ನು ಪಡೆಯಲು ಕಡ್ಡಾಯವಾಗಿ ತೇರ್ಗಡೆ ಹೊಂದಬೇಕಾಗಿರುತ್ತದೆ. ಕಾಲಮಿತಿ ಆಯ್ಕೆ ವೇತನ ಶ್ರೇಣಿಯನ್ನು ಪಡೆಯಲು ಎಸ್.ಎಸ್.ಎಲ್.ಸಿ. ಹಾಗೂ ಪದೋನ್ನತ್ತಿ ಹುದ್ದೆಗೆ ಗೊತ್ತುಪಡಿಸಿದ ಇಲಾಖಾ ಪರೀಕ್ಷೆಗಳನ್ನು ತೇರ್ಗಡೆ ಹೊಂದ ಬೇಕಾಗಿದೆ.

ಈ ವಿಷಯವನ್ನು ಮಾನ್ಯಗಾರಿಕೆ ಕ್ಷೇತ್ರ ಪಾಲಕರ ಸಂಘದ ಮನವಿಯಂತೆ ಕೂಲಂಕುಷವಾಗಿ ಪರಿಶೀಲಿಸಿ ಸದ್ರಿ ಹುದ್ದೆಯನ್ನು ಗ್ರೂಪ್ 'ಡಿ' ವರ್ಗೀಕರಣಕ್ಕೊಳಪಡಿಸಿ ನೌಕರರಿಗೆ ವಾರ್ಷಿಕ ಬಡ್ತಿ, ಕಾಲಮಿತಿ ಆಯ್ಕೆ ವೇತನ ಶ್ರೇಣಿಯನ್ನು ಹಾಗೂ ಇತರ ಸೇವಾ ಸೌಲಭ್ಯವನ್ನು ಒದಗಿಸಿಕೊಡಲು ಸರ್ಕಾರವು ಪರಿಶೀಲಿಸುತ್ತಿದೆ.

ಮಾನ್ಯಗಾರಿಕೆ ಕ್ಷೇತ್ರಪಾಲಕರು ಈ ಕೆಳಗಿನ ಇತರ ಬೇಡಿಕೆಗಳನ್ನು ಸಲ್ಲಿಸಿರುವರು

(1) ಗ್ರೂಪ್ 'ಸಿ' ನೌಕರರ ಸೌಲಭ್ಯವನ್ನು ಮಾನ್ಯಗಾರಿಕೆ ಕ್ಷೇತ್ರ ಪಾಲಕರಿಗೆ ಒದಗಿಸಿಕೊಡುವುದು'

ಮಾನ್ಯಗಾರಿಕೆ ಕ್ಷೇತ್ರ ಪಾಲಕರ ಹುದ್ದೆಗೊಳಪಟ್ಟ ಸೇವಾ ಕರ್ತವ್ಯಗಳು ನಾಲ್ಕನೆ ದರ್ಜೆ ನೌಕರರ ಸೇವೆಗೆ ಸಮನಾಗಿರುವುದರಿಂದ ಈ ನೌಕರರನ್ನು ಈ ಹಿಂದೆ ಇರುವಂತೆ ಗ್ರೂಪ್ 'ಡಿ' ಎಂದು ಪರಿಗಣಿಸಿ ಅವರಿಗೆ ಎಲ್ಲಾ ಸೇವಾ ಸೌಲಭ್ಯಗಳನ್ನು ಒದಗಿಸಿಕೊಡಲು ಸರ್ಕಾರವು ಪರಿಶೀಲಿಸುತ್ತಿದೆ.

(2) ಮಾನ್ಯಗಾರಿಕೆ ಕ್ಷೇತ್ರಪಾಲಕರಿಗೆ ರೂ. 490-950ರ ವೇತನ ಶ್ರೇಣಿಯನ್ನು ಒದಗಿಸುವುದು.

ಮಾನ್ಯಗಾರಿಕೆ ಕ್ಷೇತ್ರಪಾಲಕರಿಗೆ ೧-೧-೧೯೭೭ ರಿಂದ ೨೮೦-೫೦೦ ವಂತ್ತು ೧-೧-೧೯೮೨ ರಿಂದ ರೂ. ೪೧೦-೭೮೦ರ ವೇತನ ಶ್ರೇಣಿಯನ್ನು ಮಂಜೂರು ಮಾಡಲಾಗಿದೆ. ಮುಂದಿನ ವೇತನ ಪುನರ್ವಿಮರ್ಶೆಯನ್ನು ಸರ್ಕಾರವು ನಿಗದಪಡಿಸಿರುವ ವೇತನ ಆಯೋಗದ ನಿರ್ಣಯದಂತೆ ಕೈಗೊಳ್ಳಲಾಗುವುದು.

(3) ಮಿನಾನುಗಾರಿಕೆ ಕ್ಷೇತ್ರಪಾಲಕರಿಗೆ ಸಮವಸ್ತ್ರ, ಷೂ ಮತ್ತು ಗುರುತಿನ ಕಾರ್ಡು ಕೊಡುವ ಬಗ್ಗೆ.

ಇಲಾಖೆಯ ಕೆಲವು ಹುದ್ದೆಗಳಿಗೆ ಸಮವಸ್ತ್ರವನ್ನು ಪೂರೈಸಲು ಅವಕಾಶವಿದೆ. ಆದರೆ ಮಿನಾನುಗಾರಿಕೆ ಕ್ಷೇತ್ರಪಾಲಕರಿಗೆ ಈ ಅನುಕೂಲವನ್ನು ಬದಗಿಸಲು ಅವಕಾಶವಿರುವುದಿಲ್ಲ. ಆದುದರಿಂದ ಈ ಬೇಡಿಕೆಗಳನ್ನು ಸರ್ಕಾರವು ನಿಯಮಾವಳಿಯಂತೆ ಪರಿಶೀಲಿಸಿ ನಿರ್ಣಯಂ ಕೈಗೊಳ್ಳಲಾಗುವುದು.

(4) ನೂರಕ್ಕೆ ನೂರುಪಾಲು ಮಿನುಗಾರಿಕೆ ಕ್ಷೇತ್ರಪಾಲಕ ಹುದ್ದೆಗೆ ಮಿನುಗಾರಿಕೆ ಮೇಲ್ವಿಚಾರಕ ಹುದ್ದೆಗೆ ಪದೋನ್ನತಿ.

ಇಲಾಖೆಯ ನೇಮಕಾತಿ ನಿಯಮಾವಳಿಯಂತೆ ಅರ್ಹತೆಯುಳ್ಳ ಮಿನುಗಾರಿಕೆ ಕ್ಷೇತ್ರಪಾಲಕರನ್ನು ಶೇ. ೩೩ ೧/೩ರಷ್ಟು ಮಿನುಗಾರಿಕೆ ಮೇಲ್ವಿಚಾರಕ ಹುದ್ದೆಯನ್ನು ಪದೋನ್ನತಿ ಮೇರೆಗೆ ತುಂಬಲಾಗುತ್ತಿದೆ

ಈ ಪದೋನ್ನತಿ ಅವಕಾಶವು ಇಲಾಖೆಯ ಕಾರ್ಯದಕ್ಷತೆಯನ್ನು ಅನುಸರಿಸಿ ಸಮಂಜಸವಾಗಿದೆ.

(5) ಯೋಜನಾ ಭತ್ಯ ಮತ್ತು ಮಿನುಸಾಗಣಿಕೆ ಕೇಂದ್ರದ ಭತ್ಯ.

ಯೋಜನಾ ಭತ್ಯದ ಸೌಲಭ್ಯವು ಹಲವಾರು ನೀರಾವರಿ ಯೋಜನೆಗೆ ಒಳಪಟ್ಟು ಇಲಾಖೆಯ ನೌಕರರಿಗೆ ಮಾತ್ರ ಲಭಿಸುವುದು. ಯೋಜನಾ ಕ್ಷೇತ್ರದಲ್ಲಿನ ಇತರ ಅಭಿವೃದ್ಧಿ ಇಲಾಖೆಯ ನೌಕರರಿಗೆ ಇದು ಅನ್ವಯಿಸುವುದಿಲ್ಲ. ಈ ಬೇಡಿಕೆಯನ್ನು ವೇತನ ಆಯೋಗದ ಶಿಫಾರಸ್ಸಿನಂತೆ ಪರಿಗಣಿಸಲಾಗುವುದು.

(6) ವಾರದ ಆರನೇ ದಿನದ ರಜಾ ಸಂಬಳ ಪಾವತಿ.

ಈ ಬೇಡಿಕೆಯನ್ನು ಸರ್ಕಾರವು, ಬೇರೆ ಇಲಾಖೆಯಲ್ಲಿನ ನೌಕರರ ಸೌಲಭ್ಯಗಳನ್ನು ಪರಿಶೀಲಿಸಿ ಕೊಂಡು ನಿರ್ಣಯ ಕೈಗೊಳ್ಳಲಾಗುವುದು.

ಮೇಲಿನ ಬೇಡಿಕೆಗಳ ವಿಚಾರದಲ್ಲಿ ಮಿನುಗಾರಿಕೆ ನಿರ್ದೇಶಕರು, ಸಂಘದ ಮುಖಂಡರಲ್ಲಿ ಸೂಕ್ಷ್ಮ ಚರ್ಚಿಸಿ, ಇಲಾಖೆಯು ಕೈಗೊಂಡ ಕ್ರಮಗಳನ್ನು ವಿವರಿಸಿದ್ದುದರಿಂದ ಸಂಘವು, ಸರದಿ ಉಪವಾಸ ಸತ್ಯಾಗ್ರಹವನ್ನು ದಿನಾಂಕ ೨೨-೧-೧೯೮೬ರ ಸಂಜೆಯಿಂದ ಹಿಂತೆಗೆದುಕೊಂಡಿರುತ್ತಾರೆ.

ಉಪಾಧ್ಯಕ್ಷರು.—ಈಗ ನಿಯಮ ೩೫೪ರ ಪ್ರಕಾರ ಸಭೆಯ ಗಮನಕ್ಕೆ ತರುವ ವಿಷಯಗಳು.

ನಿಯಮ ೩೫೪ರ ಮೇರೆಗೆ

ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿಯ ಶ್ರೀ ಉಮೇಶ್‌ಶೆಣೈ ಎಂಬ ವ್ಯಾಪಾರಿಯ ಮೇಲೆ ಸುಳ್ಳು ಮೊಕದ್ದಮೆ ಹೂಡಿರುವ ಬಗ್ಗೆ.—

ಶ್ರೀ ಬಿ. ಎಸ್. ಯಡಿಯೂರಪ್ಪ.—ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ನಗರದಲ್ಲಿ ಪೋಲೀಸ್ ಅಧಿಕಾರಿಗಳು ವಿನಾ ಕಾರಣ ಯಾವುದೇ ತಪ್ಪು ಮಾಡದಿದ್ದರೂ ದಿನಾಂಕ ೨೪-೧-೮೬ರಂದು ಶ್ರೀ ಉಮೇಶ್ ಶೆಣೈ ಎಂಬ ವ್ಯಾಪಾರಿಯನ್ನು ಸುಳ್ಳು ಮೊಕದ್ದಮೆ ಹೂಡಿ ಬಂಧಿಸಿ, ಜ್ಯುಡಿಷಿಯಲ್ ಕಷ್ಟಡಿಗೆ ಕೊಟ್ಟಿದ್ದಾರೆ. ಈ ಬಗ್ಗೆ ಎಲ್ಲ ಪಕ್ಷದ ನಾಯಕರು ಪೋಲೀಸ್ ಅಧಿಕಾರಿಗಳನ್ನು ಭೇಟಿ ಮಾಡಿ ಕಾರಣ ಕೇಳಿದರೂ ತಿಳಿಸದ ಪರಿಣಾಮವಾಗಿ ದಿನಾಂಕ ೨೫-೧-೧೯೮೬ ರಂದು ಈ ರೀತಿಯ ಕಾನೂನು ಬಾಹಿರ ಕ್ರಮ ವಿರೋಧಿಸಿ ತೀರ್ಥಹಳ್ಳಿ ಬಂದ್ ಆಚರಿಸಿರುತ್ತಾರೆ. ಈ ಹಿಂದೆ ಈ ಸದನದಲ್ಲಿ ಹತ್ತಾರು